ಆಡುಭಾಷೆಗೆ ಅದೆಷ್ಟು ಆಯಾಮಗಳು. ಅದಕ್ಕೆಂದೇ 'ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು' ಎಂಬ ನುಡಿಗಟ್ಟು ಹುಟ್ಟಿಕೊಂಡಿದ್ದು. ನಾಲಿಗೆಯೊಂದು ಶುದ್ಧವಿದ್ದರೆ ಪ್ರಪಂಚವನ್ನೇ ಗೆಲ್ಲಬಹುದಂತೆ. 'ಹಲ್ಲು ಬಿಗಿಹಿಡಿದು ಮಾತನಾಡು' ಎಂದರೇನೇ ನಾಲಿಗೆಗೆ ಬುದ್ಧಿ ಹೇಳಿದಂತೆ. ಬುದ್ಧಿಯಿಂದ ದೊಡ್ಡವರಾಗಬೇಕೇ ಹೊರತು ಬಾಯಿಂದ ಅಲ್ಲ ಎಂಬುದು ಎಲ್ಲ ಕಾಲಕ್ಕೂ ಸಲ್ಲುವ ಪರಮ ಸತ್ಯ!



ಮಾನ್ಯ ವಾಚಕರು ಕ್ಷಮಿಸಬೇಕು. ಇದೇನಿವ, ಹಲ್ಲು–ನಾಲಿಗೆಯ ಜಿಜ್ಞಾಸೆಗಿಳಿದನಲ್ಲ ಎನ್ನದಿರಿ. 'ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು' ಎಂಬ ಗಾದೆಯನ್ನು ಪ್ರಾಥಮಿಕ ಶಾಲೆಯಲ್ಲಿಯೇ ಗೋಡೆಗೆ ಬರೆಸಿ ಹಾಕಿದ್ದರು, ನಮ್ಮ ಕಾಲದ ಸರ್ಕಾರೀ ಶಾಲೆಯ ಮಾಸ್ತರರು. ಈ ಮಾತು ಸದಾ ನಮ್ಮ ನಜರಿಗೆ ಬೀಳುವ ಮೂಲಕ, ಹುಡುಗರು ತಂತಮ್ಮ ನಾಲಿಗೆಯನ್ನು ಹದ್ದುಬಸ್ತಿನಲ್ಲಿರಿಸಿಕೊಳ್ಳುವ ಮೂಲಕ ಸುಸಂಸ್ಕೃತರಾಗಿ ಬೆಳೆಯಲಿ ಎಂಬ ದೂರದೃಷ್ಟಿಯಿಂದ ಮನೆಯ ಹಿರಿಯ ಜೀವಗಳು – ಮಕ್ಕಳು ತುಸು ಹದ್ದು ಮೀರಿದ ಮಾತು ಆಡಿದರೆ ಸಾಕು, 'ಬಾಯಿ ಯಾವುದೋ ಮುಕುಳಿ ಯಾವುದೋ, ಹಂಗ ಮಾತ್ಯಾಡಬ್ಯಾಡಲೇ ತಮ್ಮ' ಎಂದು ಗದರುತ್ತಿದ್ದರು. 'ಏ ಹಲ್ಕಟ್ಟಾ' ಎಂಬೋ ಪರೋಕ್ಷ ಹೆಸರಿಟ್ಟು ಕರೆಯುತ್ತಿದ್ದರು. ಬಯ್ದು ಬುದ್ಧಿ ಹೇಳುತ್ತಿದ್ದರು. ಈಗ ನಮ್ಮ ಜನ ನಾಯಕರೇ ಹಾಗೆ ನಾಲಿಗೆ ಹರಿಬಿಟ್ಟು ಮಾತನಾಡುತ್ತಿದ್ದರೆ, ಅವರನ್ನು ಏನೆಂದು ಕರೆಯಬೇಕು!?

ಒಮ್ಮೆ ಹಲ್ಲುಗಳಿಗೂ ನಾಲಿಗೆಗೂ ಜಗಳ ಹತ್ತಿಕೊಂಡಿತಂತೆ – 'ನಾವೆಲ್ಲ ಘಟಾನುಘಟಿಗಳು ಆಹಾರವನ್ನು ಅಗೆದೂ ಜಗಿದೂ ಅರೆದು ನುಣ್ಣಗೇ ಮಾಡಿದ ಮೇಲೆ ಈ ನಾಲಿಗೆ ಮಾರಾಯ ಬಾಯಿ ಚಪ್ಪರಿಸುತ್ತಾನೆ' ಎಂದು ಕೈಕಟ್ಟಿ ಕುಳಿತವಂತೆ. ಆಗ, ನಾಲಿಗೆ 'ನಾನು ಎಲ್ಲರಿಗೂ ಹಂಚುವ ಕೆಲಸ ಮಾಡುತ್ತೀನಿ' ಎಂದು ಸಮಜಾಯಿಷಿ ಕೊಟ್ಟಿತಂತೆ. ಕೊನೆಗೆ ಹಲ್ಲುಗಳು ಜಿದ್ದಿಗೆ ಬಿದ್ದವರಂತೆ ಹರತಾಳ ಹೂಡಿದಾಗ ನಿರ್ವಾಹವಿಲ್ಲದೆ ನಾಲಿಗೆಯು, 'ನಾನು ಒಂದೇ ಒಂದು ಆಡಬಾರದ ಮಾತು ಆಡಿದರೆ ಸಾಕು, ನೀವೆಲ್ಲಾ ಉದುರಿ ಬೀಳುತ್ತೀರಿ ಜೋಕೆ' ಎಂದು ಹೇಳಿದಾಗ, ದಾರಿಗೆ ಬಂದವಂತೆ ಈ ಹಲ್ಲುಗಳೆಲ್ಲ!

ಬುದ್ಧಿಗೇಡಿಗಳು ಅದರ ಅಂತರಾರ್ಥ ಅರಿಯಬೇಕಷ್ಟೇ! ಹೆಂಗಸರು ಹಲ್ಲುಬಿಟ್ಟರೆ ಸಾಕು, ಪುರುಷ ಪ್ರಪಂಚವೇ ಸೋಲುತ್ತದಂತೆ. ಅದು ಹಲ್ಲಿಗಿರುವ ಸಾಮರ್ಥ್ಯವಲ್ಲವೆ? ಆ ಸಾಮರ್ಥ್ಯವನ್ನು ಕುರಿತೇ ಕವಿ ಜಿ.ಪಿ. ರಾಜರತ್ನಂ ಅವರು ಹೇಳಿರುವುದು:

ಅರ್ಥ ಮಾಡ್ಕಂಡ್ ಅಂಗಲ್ಲ ಇಂಗೆ
ಅನ್ನೋನ್ ಮಾತು ಗಂಗೆ
ಅರ್ಥ ಆಗ್ದಿದ್ರೂ ಸಿಕ್ದಂಗನ್ನೋದ್
ಸೂರ್ಯನ ಮೊಕಕ್ಕುಗ್ದಂಗೆ!

●